2015 ಕ.ತೀ.ವ. 382

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

ಕಾರ್ಯನಿರ್ವಾಹಕ ಅಭಿಯಂತರರು, HESCOM ಮತ್ತು ಇತರರು
-ವಿರುದ್ಧ- ಪ್ರಮೋದ್ ಮತ್ತು ಇತರರು *

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ವಿದ್ಯುತ್ ಪ್ರವಹನದಿಂದ ಮೃತಪಟ್ಟ ವ್ಯಕ್ತಿಯ ವಾರಸುದಾರರು ಮೇಲ್ಮನವಿದಾರ/ವಿದ್ಯುತ್ ಕಂಪನಿಯ ವಿರುದ್ಧ ಹೂಡಿದ ದಾವೆಯನ್ನು ಪುರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯವು 4,00,000/- ರೂ. ಪರಿಹಾರವನ್ನು ನಿರ್ಧರಿಸಿ ದಾವೆಯನ್ನು ಪುರಸ್ಕರಿಸಿ ಡಿಕ್ರಿ ಹಾಗೂ ತೀರ್ಪನ್ನು ಹೊರಡಿಸುತ್ತದೆ. ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಮೇಲ್ಮನವಿದಾರರು ಮೊದಲನೇ ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಮೇಲ್ಮನವಿಯು ವಜಾಗೊಳಿಸಲ್ಪಟ್ಟಿರುತ್ತದಲ್ಲದೇ ಪರಿಹಾರ ಮೊತ್ತವನ್ನು 4 ಲಕ್ಷ ರೂ.ಗಳಿಂದ 6,16,000/- ರೂ.ಗಳಿಗೆ ಏರಿಸಿ ಹೊರಡಿಸಿದ ಡಿಕ್ರಿ ಹಾಗೂ ತೀರ್ಪಿನ ಕ್ರಮವನ್ನು ಪ್ರಶ್ನಿಸಿ ಸದರಿ ನಿಯತ ಎರಡನೇ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ಮೊದಲನೇ ಮೇಲ್ಮನವಿ ನ್ಯಾಯಾಲಯವು ಪರಿಹಾರ ಮೊತ್ತವನ್ನು 4 ಲಕ್ಷ ರೂ.ಗಳಿಂದ 6,16,000/- ರೂ.ಗಳಿಗೆ ಏರಿಸುವಾಗ ಎಲ್ಲಾ ಅವಶ್ಯಕ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.

* ಆರ್.ಎಸ್.ಎ. ಸಂಖ್ಯೆ 5348/2011, ದಿನಾಂಕ: 13ನೇ ಜೂನ್ 2014.

| ಕ್ರ.ಸಂ. | ಉಲ್ಲೇಖಿಸಲಾದ ಮೊಕದ್ದಮೆಗಳು | ಪ್ಯಾರಾಗಳಲ್ಲಿ |
|---|---|---|
| 1. | 2007(2) ಎಐಆರ್ ಕರ್ನಾಟಕ ಆರ್.6<br>ಬೋರವ್ವ W/o ಮಲ್ಲಪ್ಪ ಗುಗ್ಗರಿ<br>ಹಾಗೂ ಮತ್ತೊಬ್ಬರು –ವಿರುದ್ಧ– ಕರ್ನಾಟಕ<br>ವಿದ್ಯುತ್ ಪ್ರಸರಣ ನಿಗಮ ನಿಯಮಿತ<br>ಹಾಗೂ ಇತರರು | (ಉಲ್ಲೇ) 10 |
| 2. | (2009)6 ಎಸ್‌ಸಿಸಿ 121<br>ಸರಳಾ ವರ್ಮಾ –ವಿರುದ್ಧ– ದೆಹಲಿ ಸಾರಿಗೆ ನಿಗಮ | (ಉಲ್ಲೇ) 13 |
| 3. | 1999 ಎಸಿಜೆ 728<br>ಎಸ್. ಧನವೇಣಿ ಮತ್ತು ಇತರರು –ವಿರುದ್ಧ–<br>ತಮಿಳುನಾಡು ರಾಜ್ಯ ಮತ್ತು ಇತರರು | (ಉಲ್ಲೇ) 14 |
| 4. | ಎಐಆರ್ 1963 ಎಸ್‌ಸಿ 1516<br>ಪನ್ನಾಲಾಲ್ –ವಿರುದ್ಧ– ಬಾಂಬೆ ರಾಜ್ಯ | (ಉಲ್ಲೇ) 16 |
| 5. | ಎಐಆರ್ 1969 ಎಸ್‌ಸಿ 1144<br>ಗಿಯಾನಿ ರಾಮ್ –ವಿರುದ್ಧ– ರಾಮ್‌ಜಿಲಾಲ್ | (ಉಲ್ಲೇ) 17 |
| 6. | 1990 (3) ಕೆಎಲ್‌ಜೆ 264<br>ಪಟೇಲ್ ಚಂದ್ರಪ್ಪ ಹಾಗೂ ಮತ್ತೊಬ್ಬರು<br>–ವಿರುದ್ಧ– ಹನುಮಂತಪ್ಪ ಹಾಗೂ ಇತರರು | (ಉಲ್ಲೇ) 18 |
| 7. | ಎಐಆರ್ 2000 ಎಸ್‌ಸಿ 43<br>ದೆಹಲಿ ವಿದ್ಯುತ್ ಸರಬರಾಜು ಉದ್ಯಮ<br>–ವಿರುದ್ಧ– ಬಸಂತಿ ದೇವಿ | (ಉಲ್ಲೇ) 18 |

8. *ಎಐಆರ್ 1988 ಎಸ್‌ಸಿ 54*
*ಮಹಂತ್ ಧಾಂಗಿರ್ –ವಿರುದ್ಧ–*
*ಮದನ್ ಮೋಹನ್* *(ಉಲ್ಲೇ) 18*

9. *ಐಎಲ್‌ಆರ್ 2009 ಕೆಎಆರ್ 24*
*ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ನಿಯಮಿತ*
*–ವಿರುದ್ಧ– ಅಕ್ಕಯ್ಯಮ್ಮ* *(ಉಲ್ಲೇ) 19*

ಅಪೀಲುದಾರರ ಪರ : ಶ್ರೀಮತಿ ಶರ್ಮಿಳಾ ಎಂ. ಪಾಟೀಲ್ – ವಕೀಲರು
ಪ್ರತ್ಯಪೀಲುದಾರರ ಪರ : ಶ್ರೀ ಎನ್.ಪಿ.ವಿವೇಕ್ ಮೆಹ್ತಾ – ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ :**

ವಿದ್ಯುತ್ ಪ್ರವಹನದ ಕಾರಣದಿಂದ ಬಸವರಾಜ್ ಎಂಬುವರೊಬ್ಬರು ಮರಣ ಹೊಂದಿದ ಸಂದರ್ಭದಲ್ಲಿ ನಷ್ಟಪರಿಹಾರವನ್ನು ವಸೂಲಿ ಮಾಡಲು ಅವರ ವಿರುದ್ಧ ಹೊರಡಿಸಿದ ತೀರ್ಪನ್ನು ಪ್ರಶ್ನಿಸಿ ದಂಡ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ ಮೂಲದಾವೆ ಸಂ. 11/2010ನ್ನು ಹೊಂದಿರುವ ಮೂಲದಾವೆಯ ಪ್ರತಿವಾದಿಗಳು ಈ ಅಪೀಲನ್ನು ಸಲ್ಲಿಸಿದ್ದಾರೆ. ಇಲ್ಲಿನ ಪ್ರತಿವಾದಿಗಳು ಸದರಿ ದಾವೆಯಲ್ಲಿ 1ರಿಂದ 3ರವರೆಗಿನ ವಾದಿಗಳಾಗಿದ್ದಾರೆ. ಪಕ್ಷಕಾರರನ್ನು ವಿಚಾರಣಾ ನ್ಯಾಯಾಲಯದಲ್ಲಿ ನೀಡಲಾದ ದರ್ಜೆಯ ಪ್ರಕಾರ ವಾದಿಗಳು ಹಾಗೂ ಪ್ರತಿವಾದಿಗಳೆಂದು ಉಲ್ಲೇಖಿಸಲಾಗಿದೆ.

2. ವಿದ್ಯುತ್ ಪ್ರವಹನದ ಕಾರಣದಿಂದ ಬಸವರಾಜ್ ಎಂಬುವವರು ಮರಣ ಹೊಂದಿದ ಸಂಬಂಧದಲ್ಲಿ ನಷ್ಟಪರಿಹಾರದ ಬಾಕಿಯನ್ನು ಬಿಡುಗಡೆ ಮಾಡಲು

ಸಲ್ಲಿಸಲಾದ ದಾವೆಗೆ, ಪ್ರತಿ ವರ್ಷಕ್ಕೆ ಶೇ.12ರ ಬಡ್ಡಿ ದರದೊಂದಿಗೆ 4,00,000/– ರೂ.ಗಳ ನಷ್ಟಪರಿಹಾರವನ್ನು ನೀಡಿ ದಿನಾಂಕ 23.04.2010ರಂದು ಡಿಕ್ರಿಯನ್ನು ಹೊರಡಿಸಲಾಗಿತ್ತು. ಪರಿಗಣಿಸಲಾದ ಸದರಿ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ಆರ್.ಎ. ಸಂ. 52/2010ರಲ್ಲಿ ರಾಣಿಬೆನ್ನೂರಿನಲ್ಲಿರುವ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ನಿಯತ ಅಪೀಲನ್ನು ಸಲ್ಲಿಸಲಾಗಿತ್ತು. ದಿನಾಂಕ 22.02.2011ರ ತೀರ್ಪನ್ನು ಪರಿಗಣಿಸುವ ಮೂಲಕ ಸದರಿ ಅಪೀಲನ್ನು ವಜಾಗೊಳಿಸಲಾಯಿತು. ಆದರೆ ಸದರಿ ಅಪೀಲನ್ನು ವಜಾಗೊಳಿಸುವಾಗ, ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಅಧಿವಿಚಾರಣಾ ನ್ಯಾಯಾಲಯವು ನೀಡಿದಂಥ 4,00,000/–ರೂ.ಗಳ ನಷ್ಟಪರಿಹಾರವನ್ನು, ದಾವೆಯನ್ನು ಹೂಡಿದ ದಿನಾಂಕದಿಂದ ಅದು ಸಂಪೂರ್ಣವಾಗಿ ವಸೂಲಿಯಾಗುವವರೆಗೆ ಪ್ರತಿವರ್ಷಕ್ಕೆ ಶೇಕಡಾ 6ರ ದರದಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯೊಂದಿಗೆ 6,16,000/– ರೂ.ಗಳವರೆಗೆ ಹೆಚ್ಚಿಸಿದರು. ಅಲ್ಲದೆ, ಮೊದಲ ಅಪೀಲು ನ್ಯಾಯಾಲಯವು ನೀಡಿದ ಹೆಚ್ಚುವರಿ ನಷ್ಟಪರಿಹಾರಕ್ಕೆ ಸಂಬಂಧಪಟ್ಟ ಕಾನೂನಿನ ಪ್ರಕಾರ ಅಗತ್ಯ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡುವಂತೆ ವಾದಿಗಳಿಗೆ ನಿರ್ದೇಶಿಸಲಾಯಿತು. ಅಪೀಲು ಮೆಮೋದಲ್ಲಿ ನೀಡಲಾದ ವಿವಿಧ ಕಾರಣಗಳ ಆಧಾರದ ಮೇಲೆ ಪ್ರಶ್ನಿತವೆಂದು ಕರೆಯಲಾಗುವ ತೀರ್ಪುಗಳಾಗಿವೆ.

3. ಮೂಲದಾವೆ ಸಂ. 1/2010ರಲ್ಲಿ ವಾದಿಗಳು ದಾವೆಯನ್ನು ಸಲ್ಲಿಸಲು ಕಾರಣವಾದ ಸಂಗತಿಗಳು ಈ ಮುಂದಿನಂತಿವೆ :

ಬಸವರಾಜ್ ಎಂಬುವವನು 3ನೇ ವಾದಿಯ ಮಗನಾಗಿದ್ದನು, 2ನೇ ವಾದಿಯು ಸದರಿ ಬಸವರಾಜ್ ಎಂಬುವವರನ್ನು ಕಾನೂನುಸಮ್ಮತವಾಗಿ ವಿವಾಹವಾದ ಪತ್ನಿಯಾಗಿದ್ದಾರೆ. ವಾದಿಗಳು, ಬಸವರಾಜ್‌ನೊಂದಿಗೆ ವಾಸಿಸುತ್ತಿದ್ದರು ಹಾಗೂ ಸದರಿ ಬಸವರಾಜ್ ಕುಟುಂಬದಲ್ಲಿ ಗಳಿಸುವ ಒಬ್ಬನೇ ವ್ಯಕ್ತಿಯಾಗಿದ್ದನು. ಅವನು ವ್ಯವಸಾಯಗಾರನಾಗಿದ್ದನು ಹಾಗೂ ಹಾಲನ್ನು ಮಾರಾಟ ಮಾಡಿ ಕೂಡ ತನ್ನ

ಆದಾಯ ಗಳಿಸುತ್ತಿದ್ದನು. 26.04.2009ರಂದು ಬೆಳಗ್ಗೆ ಸುಮಾರು 7.30ರ ಸಮಯದಲ್ಲಿ ಅವನು, ತನ್ನ ಮೋಟಾರು ಸೈಕಲ್ಲಿನಲ್ಲಿ ತನ್ನ ಎತ್ತಿನಗಾಡಿಗೆ ಮೇವನ್ನು ತುಂಬಲು ಹೋಗುತ್ತಿದ್ದನು. ಅವನು, ಇರಾಣಿ ಗ್ರಾಮದ ಹಾಲೇಮಠದ ಹತ್ತಿರವಿರುವ ಸ್ಥಳವನ್ನು ತಲುಪಿದಾಗ, ವಿದ್ಯುತ್ ಪ್ರವಹಿಸುತ್ತಿದ್ದ ತಂತಿಯನ್ನು ಮುಟ್ಟಿದ್ದಾನೆ. ಇದರ ಪರಿಣಾಮ ಅವನಿಗೆ ವಿದ್ಯುತ್ ಪ್ರವಹಿಸಿ ಹೆಚ್ಚಿನ ವೋಲ್ಟೇಜಿನ ಕಾರಣದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವಾದಿಯ ಪ್ರಕಾರ, ಮುಖ್ಯವಾಗಿ ವಿದ್ಯುತ್ ತಂತಿಯನ್ನು ನಿರ್ವಹಿಸುವಲ್ಲಿ ಪ್ರತಿವಾದಿಯ ಕಡೆಯಿಂದಾದ ಉದಾಸೀನದ ಕಾರಣದಿಂದ ಬಸವರಾಜ್‌ನ ಸಾವು ಸಂಭವಿಸಿದೆ. ರಾಣಿಬೆನ್ನೂರು ಗ್ರಾಮ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂ. 12/2009ರಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿ ನೋಂದಾಯಿಸಲಾಗಿತ್ತು. ಮೃತವ್ಯಕ್ತಿಯ ಶವದ ಮರಣೋತ್ತರ ಶವಪರೀಕ್ಷೆಯನ್ನು ಮಾಡಿದ ವೈದ್ಯರು, ವಿದ್ಯುತ್ ಪ್ರವಹನದ ಕಾರಣದಿಂದ ಸಾವು ಸಂಭವಿಸಿದೆಯೆಂದು ಅಭಿಪ್ರಾಯಪಟ್ಟಿದ್ದರು. ಪ್ರತಿವಾದಿಗಳು, ವಿದ್ಯುತ್ ತಂತಿಯನ್ನು ಸರಿಯಾಗಿ ನಿರ್ವಹಿಸದೆ ಅದರ ಪ್ರವಹನದಿಂದ ಸಾವಿಗೆ ಕಾರಣರಾಗಿದ್ದಾರೆನ್ನುವ ಆಧಾರದ ಮೇಲೆ 4,00,000/– ರೂ.ಗಳ ನಷ್ಟಪರಿಹಾರವನ್ನು ಕ್ಲೇಮು ಮಾಡಿ ದಾವೆಯನ್ನು ದಾಖಲಿಸಲಾಗಿತ್ತು.

4. ಎದುರುದಾರರು, ನ್ಯಾಯಾಲಯದ ಮುಂದೆ ಹಾಜರಾಗಿ, ಸವಿವರವಾದ ಲಿಖಿತ ವಿವರಣೆಯನ್ನು ಸಲ್ಲಿಸಿದ್ದಾರೆ. ಅವರ ಪ್ರಕಾರ, ವಾದಿ–ಬಸವರಾಜ್ ತಾನು ಮಾಡಿಕೊಂಡ ಅತೀ ಉದಾಸೀನತೆಯ ಕಾರಣದಿಂದ ಸಾವು ಸಂಭವಿಸಿದೆ. ಆದ್ದರಿಂದ, ತಾವು ಯಾವುದೇ ನಷ್ಟಪರಿಹಾರವನ್ನು ಸಂದಾಯ ಮಾಡಲು ಕಾರಣರಾಗಿರುತ್ತೇವೆ ಎಂಬುದಾಗಿದೆ. ಈ ವಾದ–ಪ್ರತಿವಾದಗಳೊಂದಿಗೆ ಅವರು ದಾವೆಯನ್ನು ವಜಾಗೊಳಿಸಲು ಮನವಿ ಮಾಡಿದ್ದಾರೆ.

5. ಮೇಲಿನ ವಾದ–ವಿವಾದಗಳ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ಸಲ್ಲಿಸಲು ಮುಂದಾಗಿದೆ.

## ವಿವಾದಾಂಶಗಳು

1. ಪ್ರತಿವಾದಿಗಳ ಉದಾಸೀನತೆಯ ಕಾರಣದಿಂದ ವಾದಿ ಬಸವರಾಜ್ ಮೃತನಾದನೆಂಬುದನ್ನು ವಾದಿಯು ರುಜುವಾತುಪಡಿಸಿದ್ದಾನೆಯೇ ಹಾಗೂ ವಸೂಲಿ ಯಾಗುವವರೆಗೆ ಶೇ.18ರ ಬಡ್ಡಿಯೊಂದಿಗೆ 4,00,000/– ರೂ.ಗಳ ನಷ್ಟವನ್ನು ಸಂದಾಯ ಮಾಡಲು ಪ್ರತಿವಾದಿಗಳು ಕಾರಣರಾಗಿದ್ದಾರೆಯೇ?

2. ವಾದಿಗಳು ಪರಿಹಾರ ಪಡೆದುಕೊಳ್ಳಲು ಹಕ್ಕುಳ್ಳವರಾಗಿದ್ದಾರೆಯೇ?

3. ಅಗತ್ಯ ಪಕ್ಷಕಾರರು ಸೇರ್ಪಡೆಯಾಗದ ಕಾರಣ ದಾವೆಯನ್ನು ನಿರ್ವಹಿಸಲು ಸಾಧ್ಯವಿಲ್ಲವೆಂಬುದನ್ನು ಪ್ರತಿವಾದಿಯು ರುಜುವಾತುಪಡಿಸಿದ್ದಾನೆಯೇ?

4. ಯಾವುದೇ ನಷ್ಟವನ್ನು ಸಂದಾಯ ಮಾಡಲು ಪ್ರತಿವಾದಿಗಳು ಕಾರಣರಲ್ಲವೆಂಬುದನ್ನು ಅವರು ರುಜುವಾತುಪಡಿಸಿದ್ದಾರೆಯೇ?

5. ಆದೇಶ ಅಥವಾ ಡಿಕ್ರಿ ಯಾವುದು?

6. 2ನೇ ಪ್ರತಿವಾದಿಯನ್ನು ಪ್ರಾ.ಸಾ. 1 ಎಂದು ಪರೀಕ್ಷಿಸಲಾಗಿದೆ ಹಾಗೂ ಇಬ್ಬರು ಸಾಕ್ಷಿದಾರರನ್ನು ವಾದಿಗಳ ಸಲುವಾಗಿ ಪರಿಶೀಲನೆ ಮಾಡಲಾಗಿದೆ. 21 ನಿಶಾನೆಗಳನ್ನು ವಾದಿಗಳ ಪರವಾಗಿ ಪರಿಶೀಲನೆ ಮಾಡಲಾಗಿದೆ. ಕಾಂತೇಶ್ ಎಂಬುವವರನ್ನು ಪ್ರತಿವಾದಿ ಸಾಕ್ಷ್ಯ 1 ಎಂದು ಪರಿಶೀಲನೆ ಮಾಡಲಾಗಿದೆ ಹಾಗೂ

ಪ್ರತಿವಾದಿಗಳ ಪರವಾಗಿ ದಸ್ತಾವೇಜುಗಳನ್ನು ಗುರುತು ಮಾಡಲಾಗಿರುವುದಿಲ್ಲ. ಅಂತಿಮವಾಗಿ, ವಿವಾದಾಂಶ ಸಂ.1 ಹಾಗೂ 2 ಇವುಗಳಿಗೆ ಭಾಗಶಃವಾಗಿ ಸಕಾರಾತ್ಮಕ ಉತ್ತರ ನೀಡಲಾಗಿದೆ ಹಾಗೂ ವಿವಾದಾಂಶ ಸಂ.3 ಹಾಗೂ 4 ಇವುಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ. ಪರಿಣಾಮವಾಗಿ, ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ವಸೂಲಿಯಾಗುವವರೆಗೆ ಪ್ರತಿವರ್ಷಕ್ಕೆ ಶೇಕಡಾ 12 ರ ಬಡ್ಡಿಯೊಂದಿಗೆ ನಷ್ಟಪರಿಹಾರವಾಗಿ 4,00,000/–ರೂ.ಗಳ ಮೊತ್ತವನ್ನು ಸಂದಾಯ ಮಾಡಲು ದಾವೆಯು ಪ್ರತಿವಾದಿಗಳಿಗೆ ನಿರ್ದೇಶಿಸುವ ಡಿಕ್ರಿಯನ್ನು ಹೊರಡಿಸಲಾಯಿತು. ಸದರಿ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ ಆರ್.ಎ. ಸಂ. 52/2010ರಲ್ಲಿ ರಾಣಿಬೆನ್ನೂರಿನಲ್ಲಿರುವ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರತಿವಾದಿಗಳು ಅಪೀಲನ್ನು ಸಲ್ಲಿಸಿದ್ದರು. ಅಪೀಲು ಮೆಮೋದಲ್ಲಿ ಕೆಲವು ಆಧಾರಗಳನ್ನು ಹೇಳಲಾಗಿದೆ.

7. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ ಹಾಗೂ ದಾಖಲೆಗಳನ್ನು ಅವಲೋಕಿಸಿದ ನಂತರ, ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಅಪೀಲನ್ನು ವಜಾ ಮಾಡಿದ್ದಾರೆ. ಆದರೆ, ಅಪೀಲನ್ನು ವಜಾ ಮಾಡುವಾಗ ಮಾನ್ಯ ನ್ಯಾಯಾಧೀಶರು, ಅಧಿವಿಚಾರಣಾ ನ್ಯಾಯಾಲಯದ ನಷ್ಟಪರಿಹಾರವನ್ನು 4,00,000/– ರೂ.ಗಳಿಂದ 6,16,000/– ರೂ.ಗಳಿಗೆ ಹೆಚ್ಚಿಸಿದ್ದಾರೆ ಹಾಗೂ ಮೊದಲ ಅಪೀಲು ನ್ಯಾಯಾಲಯವು ನೀಡಿದ ಹೆಚ್ಚುವರಿ ನಷ್ಟಪರಿಹಾರಕ್ಕೆ ಅಗತ್ಯ ನ್ಯಾಯಾಲಯದ ಶುಲ್ಕವನ್ನು ಸಂದಾಯ ಮಾಡಲು ವಾದಿಗೆ ನಿರ್ದೇಶಿಸಿದ್ದಾರೆ. ಅದರಿಂದ ಈ ತೀರ್ಪುಗಳನ್ನು ಈ ನ್ಯಾಯಾಲಯದ ಮುಂದೆ ಪ್ರಶ್ನಿಸಿದ್ದಾರೆ. ಕೆಲವು ಆಧಾರಗಳನ್ನು ಅಪೀಲು ಮೆಮೋದಲ್ಲಿ ನೀಡಲಾಗಿದ್ದು, ಅಪೀಲು ಮೆಮೋದಲ್ಲಿ ಪ್ರಸ್ತಾವಿಸಲಾದ ಕಾನೂನಿನ ಗಣನೀಯ ಪ್ರಶ್ನೆಗಳು ಈ ಮುಂದಿನಂತಿವೆ :

1. ಮೊದಲ ಅಪೀಲು ನ್ಯಾಯಾಲಯವು ತಾನಾಗಿಯೇ ನಷ್ಟವನ್ನು ಹೆಚ್ಚಿಸಿರುವುದು ಅಧಿಕಾರ

ವ್ಯಾಪ್ತಿಯೊಳಗಿದೆಯೇ ಹಾಗೂ ಸಮರ್ಥಿಸಿಕೊಳ್ಳಬಹುದಾಗಿದೆಯೇ?

2. ಎದುರು ಕ್ಲೇಮನ್ನು ಸಲ್ಲಿಸದಿದ್ದರೂ ಹಾಗೂ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡದಿದ್ದರೂ ಅಪೀಲನ್ನು ವಜಾ ಮಾಡಿರುವ ಮೊದಲ ಅಪೀಲು ನ್ಯಾಯಾಲಯವು ನಷ್ಟವನ್ನು ಹೆಚ್ಚಿಸುವುದು ಕಾನೂನಿನ ರೀತಿಯಲ್ಲಿ ಸರಿಯಾಗಿದೆಯೇ?

3. ಇದು ಮೋಟಾರು ವಾಹನ ಕ್ಲೇಮು ಅರ್ಜಿಯಾಗಿದ್ದಂತೆ ನಷ್ಟಗಳ ದಾವೆಯನ್ನು ವ್ಯವಹರಿಸುವ ಕಾನೂನಿನಲ್ಲಿ ಮೊದಲ ಅಪೀಲು ನ್ಯಾಯಾಲಯವು ಸರಿಯಾಗಿದೆಯೇ?

4. ಅಪೀಲುದಾರರ ಕಡೆಯಿಂದಾದ ಉದಾಸೀನತೆಯಾಗಿರದಿದ್ದರೂ ದಾವೆಯನ್ನು ಡಿಕ್ರಿಗೊಳಿಸುವುದನ್ನು ಅಧಿವಿಚಾರಣಾ ನ್ಯಾಯಾಲಯ ಸಮರ್ಥಿಸುತ್ತದೆಯೇ?

8. ಅಪೀಲುದಾರರ ಪರವಾಗಿರುವ ಮಾನ್ಯ ವಕೀಲರು, ವಾದಿಗಳು ಅಪೀಲನ್ನು ಸಲ್ಲಿಸದಿರುವಾಗ ಅಥವಾ ದಂಡಪ್ರಕ್ರಿಯಾ ಸಂಹಿತೆಯ 22ನೇ ನಿಯಮದ 41ನೇ ಆದೇಶದ ಮೇರೆಗೆ ಪಾಟೀ ಆಕ್ಷೇಪಣೆಯನ್ನು ಸಲ್ಲಿಸದಿದ್ದಾಗ ಮೊದಲ ಅಪೀಲು ನ್ಯಾಯಾಲಯವು 4,00,000/- ರೂ.ಗಳಿಂದ 6,16,000/- ರೂ.ಗಳವರೆಗೆ ನಷ್ಟಪರಿಹಾರವನ್ನು ಹೆಚ್ಚಿಸಲು ಸಾಧ್ಯವಿಲ್ಲವೆಂದು ದೀರ್ಘವಾಗಿ ವಾದಿಸಿ ಸಮರ್ಥಿಸಿಕೊಂಡಿದ್ದಾರೆ. ನಷ್ಟಪರಿಹಾರವನ್ನು ಯಾವ ಅಧಿಕಾರದ ಮೇರೆಗೆ ಹೆಚ್ಚಿಸಿದೆಯೋ ಅದನ್ನು ಮೊದಲ ಅಪೀಲು ನ್ಯಾಯಾಲಯದ ತೀರ್ಪು

ತಿಳಿಯಪಡಿಸಿರುವುದಿಲ್ಲವೆಂದು ವಾದಿಸಿದ್ದಾರೆ. ಅಲ್ಲದೆ, ಮೋಟಾರು ಅಪಘಾತ ಕ್ಲೇಮುಗಳಲ್ಲಿ ನಷ್ಟಪರಿಹಾರವನ್ನು ನಿರ್ಧರಿಸಲು ಅನ್ವಯಿಸಬಹುದಾದ ತತ್ವಗಳನ್ನು, ಕರ್ತವ್ಯಲೋಪದ ಕಾರಣವನ್ನು ಆಧರಿಸಿರುವ ಈ ರೀತಿಯ ಪ್ರಕರಣಗಳಲ್ಲಿನ ನಷ್ಟಪರಿಹಾರವನ್ನು ನಿರ್ಧರಿಸುವುದಕ್ಕೆ ಅನ್ವಯಿಸಲು ಸಾಧ್ಯವಾಗುವುದಿಲ್ಲವೆಂದು ವಾದಿಸಿದ್ದಾರೆ. ಎರಡೂ ನ್ಯಾಯಾಲಯಗಳ ತೀರ್ಪುಗಳನ್ನು ಅವಲೋಕಿಸಲಾಗಿದೆ.

9. ಬಸವರಾಜ್ ಎಂಬುವವರು ವಿದ್ಯುತ್ ಪ್ರವಹನದಿಂದ ಮರಣ ಹೊಂದಿದ್ದಾರೆಂಬ ಸಂಗತಿಯಲ್ಲಿ ಯಾವುದೇ ಸಂಶಯವಿಲ್ಲ. ಬಸವರಾಜ್ ಎಂಬುವವರು ಕೃಷಿಕರಾಗಿದ್ದರೆಂದು ಹಾಗೂ ಅವನು ಹಸುಗಳನ್ನು ಸಾಕುತ್ತಿದ್ದುದರಿಂದ ಹಾಲನ್ನು ಮಾರುತಿದ್ದರೆಂಬುದನ್ನು ಮೊದಲ ಅಪೀಲು ನ್ಯಾಯಾಲಯದ ತೀರ್ಪು ಬಹಿರಂಗಪಡಿಸುತ್ತದೆ. ಬಸವರಾಜ್‌ರವರು ದಿನಾಂಕ 26.04.2009ರಂದು 7.30ಕ್ಕೆ ತನ್ನ ಮೋಟಾರು ವಾಹನದಲ್ಲಿ ಇರಾಣಿ ಗ್ರಾಮದ ಹತ್ತಿರವಿರುವ ಹಳೇಮಠದ ಬಳಿ ಹೋಗಿದ್ದರೆಂಬುದನ್ನು ಹಾಗೂ ವಿದ್ಯುತ್ ಪ್ರವಹಿಸುತ್ತಿದ್ದ ತಂತಿಯನ್ನು ಸ್ಪರ್ಶಿಸಿದ್ದರೆಂಬುದನ್ನು ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಪ್ರಕಟಪಡಿಸುತ್ತದೆ. ಹಾಗೆಯೇ ವಾದಿ ಸಾಕ್ಷ್ಯವು ಹಾಜರಿರಲಿಲ್ಲ. ಈ ಸಂಬಂಧದಲ್ಲಿ, ವಾದಿ ಸಾಕ್ಷ್ಯ 2 ಹಾಗೂ 3 ಇವರನ್ನು ಪರಿಶೀಲಿಸಲಾಗಿದೆ ಹಾಗೂ ವಿದ್ಯುತ್ ಪ್ರವಹನದ ಕಾರಣದಿಂದ ಬಸವರಾಜ್‌ರವರು ಮರಣಹೊಂದಿದ ಸಂಗತಿಯು ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿದ ವೈದ್ಯರ ಅಭಿಪ್ರಾಯದಿಂದ ತಿಳಿದುಬಂದಿದೆ.

ಅಲ್ಲದೆ, ಪ್ರತಿವಾದಿಯು ವಿದ್ಯುತ್ ತಂತಿಯನ್ನು ನಿರ್ವಹಿಸುವಲ್ಲಿ ತೋರಿದ ಉದಾಸೀನತೆಗಾಗಿ ಅಪರಾಧ ಸಂ.12/2009ರಲ್ಲಿ ಪ್ರಕರಣವನ್ನು ಪೊಲೀಸರು ದಾಖಲಿಸಿದ್ದಾರೆ.

10. ***ರೇಲ್ಯಾಂಡ್ಸ್ –ವಿರುದ್ಧ– ಫ್ಲೆಚ್ಚರ್***ರವರ ಪ್ರಕರಣದಲ್ಲಿ ಪ್ರತಿಪಾದಿಸಲಾದಂತೆ ಕಟ್ಟುನಿಟ್ಟಿನ ಜವಾಬ್ದಾರಿಯ ತತ್ವಗಳನ್ನು, ಪ್ರಸ್ತುತ ಪ್ರಕರಣದಲ್ಲಿ ಅನ್ವಯ ಮಾಡಲಾಗಿದೆ. ಪ್ರಕರಣವನ್ನು ಸರಿಯಾಗಿ ನಿರ್ವಹಿಸುವಲ್ಲಿ ವ್ಯಕ್ತಿಗಳ ಜವಾಬ್ದಾರಿ

ತುಂಬಾ ಮಹತ್ತರವಾದುದಾಗಿದೆ. ಬಸವರಾಜ್‌ರವರು ವಿದ್ಯುತ್ ಪ್ರವಹನದ ಕಾರಣದಿಂದ ಮರಣ ಹೊಂದಿದ್ದಾರೆಂಬ ಸಂಗತಿಯಲ್ಲಿ ಯಾವುದೇ ವಿವಾದವಿಲ್ಲ. ಆ ದುರ್ದಿನದಂದು ಸುಮಾರು 7.30ರಲ್ಲಿ ಆತನ ತಲೆಯ ಮೇಲೆ ವಿದ್ಯುತ್ ಸಂವಹಿಸುತ್ತಿದ್ದ ತಂತಿ ಬಿದ್ದಿರುವ ಕಾರಣದಿಂದ ವಿದ್ಯುತ್ ಸಂಚಾರವಾಗಿದೆ. ಬಸವರಾಜ್‌ರವರು ವಿದ್ಯುತ್ ಕಂಬದ ಬಳಿ ಹೋಗಿ ಅದನ್ನು ಹತ್ತಲು ಪ್ರಯತ್ನಿಸಿದ್ದಾರೆ, ಆದ್ದರಿಂದ ಅದನ್ನು ಸ್ಪರ್ಶಿಸಿದ್ದಾರೆಂಬುದನ್ನು ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಗಳು ಸಮರ್ಥಿಸಿದರೂ ಅದನ್ನು ಯಾವುದೇ ರೀತಿಯಲ್ಲಿ ನಿರೀಕ್ಷಿಸಲಾಗುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಸಹಜವಾಗಿ ಸಂಭವಿಸಬಹುದಾದ ಘಟನೆಗಳನ್ನು ನಿಕೃಷ್ಟಗೊಳಿಸಿ ಮರಣದ ಕಾರಣಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ಸಾಕ್ಷಿಗಳನ್ನು ಅಳೆದು ನೋಡಿದ್ದಾರೆ ಹಾಗೂ ಮೊದಲ ಅಪೀಲು ನ್ಯಾಯಾಲಯವು ಅದನ್ನು ಎತ್ತಿಹಿಡಿದಿದೆ. ಈ ಕಾರಣದಿಂದ ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ಮಾರ್ಗವನ್ನು ನಿರ್ವಹಿಸುವಲ್ಲಿ ಪ್ರತಿವಾದಿಯು ತೋರಿದ ಉದಾಸೀನತೆಗೆ ಸಂಬಂಧಪಟ್ಟಂಥ ವಾಸ್ತವಿಕ ಅಂಶಗಳಲ್ಲಿ ಪ್ರವೇಶಿಸುವ ಯಾವುದೇ ಕಾರಣವನ್ನು, ಈ ನ್ಯಾಯಾಲಯವು ಗುರುತಿಸಿಲ್ಲ. ಮಂಡಲಿಯು ತನ್ನ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಒಮ್ಮೆ ಸಾವು ಸಂಭವಿಸಿದರೆ, ಅನಧಿಕೃತವಾಗಿ ಮುಖ್ಯತಂತಿ ಮಾರ್ಗದಿಂದ ವಿದ್ಯುತ್ತನ್ನು ಎಳೆಯುಲು ಪ್ರಯತ್ನಿಸಿದಲ್ಲಿ ಸಂತ್ರಸ್ತನ ಕಡೆಯಿಂದ ಕಾನೂನುಬಾಹಿರ ಕೃತ್ಯ ನಡೆದ ಕಾರಣದಿಂದ ಅಪಘಾತ ಸಂಭವಿಸಿದೆಯೆನ್ನುವ ಆಧಾರದ ಮೇಲೆ ವಿದ್ಯುಚ್ಛಕ್ತಿ ಮಂಡಳಿಯನ್ನು ಹೊಣೆಗಾರಿಕೆಯಿಂದ ಮುಕ್ತಿಗೊಳಿಸಲು ಸಾಧ್ಯವಾಗುವುದಿಲ್ಲ. ಕಟ್ಟುನಿಟ್ಟಿನ ಹೊಣೆಗಾರಿಕೆಯ ತತ್ವ ಅನ್ವಯವಾಗುತ್ತದೆ. ***ಬೋರವ್ವ W/o ಮಲ್ಲಪ್ಪ ಗುಗ್ಗರಿ ಹಾಗೂ ಮತ್ತೊಬ್ಬರು –ವಿರುದ್ಧ– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ಇತರರು***[1]**,** ಪ್ರಕರಣದಲ್ಲಿ ಈ ನ್ಯಾಯಾಲಯವು ಕಾನೂನನ್ನು ಪುನರುಚ್ಚರಿಸಿದೆ.

11. ಅಪೀಲುದಾರನ ಪರ ಹಾಜರಾಗಿರುವ ಮಾನ್ಯ ವಕೀಲರು, ಅಪೀಲನ್ನು ವಜಾಗೊಳಿಸಿದ್ದರೂ ಮೊದಲ ಅಪೀಲು ನ್ಯಾಯಾಲಯವು ನಷ್ಟಪರಿಹಾರವನ್ನು

1. 2007(2) ಎಐಆರ್ ಕರ್ನಾಟಕ ಆರ್.6

ಹೆಚ್ಚಿಸಿರುವ ಕುರಿತು ಬಲವಾಗಿ ವಾದಿಸಿದ್ದಾರೆ. ಆ ವಾದ ಏನೆಂದರೆ, ಮೊದಲ ಅಪೀಲು ನ್ಯಾಯಾಲಯವು, ಯಾವ ಅಧಿಕಾರದ ಮೇರೆಗೆ ಅದು ನಷ್ಟಪರಿಹಾರವನ್ನು ಹೆಚ್ಚಿಸಿದೆಯೋ ಅದರ ಬಗೆಗಿನ ಯಾವುದೇ ಕಾರಣಗಳನ್ನು ತಿಳಿಸಿಲ್ಲ ಎಂಬುದಾಗಿದೆ. ಅಧಿವಿಚಾರಣಾ ನ್ಯಾಯಾಲಯವು ಯಾಕೆ ನಷ್ಟಪರಿಹಾರದ ಹಣವೆಂದು ಕೇವಲ 4,00,000/– ರೂ.ಗಳನ್ನು ಮಂಜೂರು ಮಾಡಿದೆ ಎಂಬುದರ ಬಗ್ಗೆ ಯಾವುದೇ ನಿರ್ದಿಷ್ಟ ನಿರ್ಧರಣೆಯನ್ನು ನೀಡಿಲ್ಲವೆಂಬುದು ಕಂಡುಬರುತ್ತದೆ. ಒಪ್ಪಿಕೊಂಡಿರುವ ಹಾಗೆ ಘಟನೆ ನಡೆದ ಸಮಯದಲ್ಲಿ ಮೃತನ ವಯಸ್ಸು ಸರಿಸುಮಾರು 35 ವರ್ಷ ಆಗಿತ್ತು. ಅವನು ಕೃಷಿಕನಾಗಿದ್ದನೆಂಬುದರಲ್ಲಿ ಯಾವುದೇ ತೀವ್ರತರವಾದ ವಿವಾದವಿಲ್ಲ. ಅವನು ಕೆಲವು ಹಸುಗಳನ್ನು ಸಾಕುತ್ತಿದ್ದ ಹಾಗೂ ಹಾಲು ಸಹಕಾರ ಸಂಘಕ್ಕೆ ಹಾಲನ್ನು ಮಾರಾಟ ಮಾಡುವ ಮೂಲಕ ಹಣವನ್ನು ಗಳಿಸುತ್ತಿದ್ದು, ದಸ್ತಾವೇಜೀಯ ಸಾಕ್ಷ್ಯವನ್ನು ಒದಗಿಸಿದ್ದಾನೆಂಬುದು ವಾಸ್ತವ ಸಂಗತಿಯಾಗಿದೆ. ವಾಸ್ತವವಾಗಿ ಮೃತ ಬಸವರಾಜ್ ಪ್ರತಿತಿಂಗಳು ಎಷ್ಟು ಆದಾಯ ಗಳಿಸುತ್ತಿದ್ದ ಎಂಬುದು ತಿಳಿದುಬಂದಿಲ್ಲ. ಈ ರೀತಿಯ ಪ್ರಕರಣದಲ್ಲಿ ನ್ಯಾಯಾಲಯವು ಸ್ಥೂಲವಾದ ಅಧಿಕ ಸಂಭಾವ್ಯತೆಗಳ ಆಧಾರದ ಮೇಲೆ ಅದನ್ನು ನಿರ್ಧರಣೆ ಮಾಡಬೇಕು.

12. ಒಪ್ಪಿಕೊಂಡಿರುವ ಹಾಗೆ, ಬಸವರಾಜು ಸ್ವಂತವಾಗಿ ಮೋಟಾರು ಸೈಕಲ್ಲನ್ನು ಹೊಂದಿದ್ದರು. ಮೋಟಾರು ಸೈಕಲ್ಲಿನ ಮೌಲ್ಯ ಸುಮಾರು 40,000/– ರೂ.ಗಳಿಂದ 50,000/– ರೂ.ಗಳಾಗಿರುತ್ತದೆ. ಅವನು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ಹೊರತು ಅವನು ಮೋಟಾರು ವಾಹನವನ್ನು ಹೊಂದಿರುತ್ತಿರಲಿಲ್ಲ. ಬಸವರಾಜ್ ತನ್ನ ತಂದೆಯಿಂದ ಅನುವಂಶೀಯವಾಗಿ ಬಂದಿದ್ದ ಸ್ವಲ್ಪ ಜಮೀನನ್ನು ಹೊಂದಿದ್ದನೆಂಬ ಸಂಗತಿ ನಿಶಾನೆ ಪಿ.18ರಿಂದ 20 ಎಂದು ಗುರುತಿಸಲಾದ ಹಕ್ಕುಗಳ ದಾಖಲೆಯಿಂದ ತಿಳಿದುಬರುತ್ತದೆ. ನಿಶಾನೆ ಪಿ.21 ಇದು, ಬಸವರಾಜ್ ಪ್ರತಿದಿನ ಬೆಳಗ್ಗೆ ಸರಾಸರಿ 10 ಲೀಟರುಗಳು ಹಾಗೂ ಸಂಜೆ 8 ಲೀಟರುಗಳ ಹಾಲನ್ನು ತಮ್ಮ ಸಂಘಕ್ಕೆ ಹಾಕುತ್ತಿದ್ದನೆಂಬುದನ್ನು ತಿಳಿಸಿ ವೆಂಕಟೇಶ್ವರ ಹಾಲಿನ ಡೇರಿಯು ನೀಡಿರುವ ಪ್ರಮಾಣಪತ್ರವಾಗಿದೆ. ಒಟ್ಟಾರೆ ಎಲ್ಲಾ ಪರಿಸ್ಥಿತಿಗಳನ್ನು ತೆಗೆದುಕೊಂಡು ಮೊದಲ ಅಪೀಲು ನ್ಯಾಯಾಲಯವು, ಮೃತನ ಸಂಭಾವ್ಯ ಆದಾಯ ಪ್ರತಿ ತಿಂಗಳಿಗೆ

4,000/–ರೂ.ಗಳಾಗಿತ್ತೆಂಬ ನಿರ್ಧಾರಕ್ಕೆ ಬಂದಿರುತ್ತದೆ. ವಾಸ್ತವವಾಗಿ ಅಧಿವಿಚಾರಣಾ ನ್ಯಾಯಾಲಯವು ಈ ಪ್ರಯತ್ನವನ್ನು ಮಾಡಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು, ನಷ್ಟಪರಿಹಾರವನ್ನು ಹಾಗೂ ಸಮಗ್ರ ನಷ್ಟಪರಿಹಾರವೆಂದು ನೀಡುತ್ತಿರುವ ನಷ್ಟಪರಿಹಾರವನ್ನು ನಿರ್ಧರಿಸುವ ಅಂಥ ಯಾವುದೇ ಪ್ರಯತ್ನವನ್ನು ಮಾಡಿಲ್ಲದಿರುವ ಹಿನ್ನೆಲೆಯಲ್ಲಿ, ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಆದಾಯದ ಅಂದಾಜನ್ನು ನಿರ್ಧರಿಸಿದ್ದಾರೆ.

13. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಮಧ್ಯಪ್ರದೇಶ ಉಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದು, ಇದರಲ್ಲಿ, ವಿದ್ಯುತ್ ಪ್ರವಹಿಸಿದ ಕಾರಣದಿಂದ ಉಂಟಾದ ವ್ಯಕ್ತಿಯ ಸಾವಿಗೆ ನಷ್ಟಪರಿಹಾರವಾಗಿ 4,34,000/– ರೂ.ಗಳನ್ನು ನೀಡಲಾಗಿದೆ. ಮಧ್ಯಪ್ರದೇಶದ ಪ್ರಕರಣವು ಯಾವ ಸಂಗತಿಗಳೊಂದಿಗೆ ವ್ಯವಹರಿಸಿತೋ ಅವುಗಳು ಈ ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನಲ್ಲಿ ಕಂಡುಬರುವುದಿಲ್ಲ. ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಉದಾಸೀನದ ಕಾರಣದಿಂದ ಆಗುವ ಸಾವಿಗೆ ಸಂಬಂಧಪಟ್ಟ ಮೋಟಾರು ಅಪಘಾತ ಕ್ಲೇಮುಗಳ ಪ್ರಕರಣಗಳಲ್ಲಿ ನಷ್ಟಪರಿಹಾರವನ್ನು ನಿರ್ಧರಿಸಲು ಅನ್ವಯಿಸಬಹುದಾದ ತತ್ವಗಳನ್ನು ಅನ್ವಯಿಸಿದ್ದಾರೆ. ***ಸರಳಾ ವರ್ಮಾ –ವಿರುದ್ಧ– ದೆಹಲಿ ಸಾರಿಗೆ ನಿಗಮ*** [2], ಪ್ರಕರಣದಲ್ಲಿ ಪ್ರತಿಪಾದಿಸಿದ ತತ್ವಗಳನ್ನು ಅವಲಂಬಿಸಲಾಗಿದೆ. ಸುಮಾರು 35 ವರ್ಷ ವಯಸ್ಸಿನ ವ್ಯಕ್ತಿಗೆ ಅನ್ವಯಿಸಬಹುದಾದ ಗುಣಕ '16' ಆಗುತ್ತದೆ ಹಾಗೂ ಅದನ್ನು ಪ್ರಸ್ತುತ ಪ್ರಕರಣದಲ್ಲಿ ಅನ್ವಯಿಸಲಾಗಿದೆ. ಮೃತರ ಸಂಭಾವ್ಯ ಆದಾಯವನ್ನು ಪ್ರತಿತಿಂಗಳಿಗೆ 4,000/– ರೂ.ಗಳಂತೆ ನಿರ್ಧರಿಸಲಾಗಿದ್ದು ಅದು ದುಬಾರಿಯೂ ಅಲ್ಲ ಅಥವಾ ಅಧಿಕವೂ ಆಗಿಲ್ಲ. ದಾಂಪತ್ಯದ ಸಂಬಂಧದಲ್ಲಿ 10,000/–ರೂ.ಗಳ ಮೊತ್ತವನ್ನು ಹಾಗೂ ಅಂತ್ಯಕ್ರಿಯೆಯ ವೆಚ್ಚದ ಸಂಬಂಧದಲ್ಲಿ 10,000/–ರೂ.ಗಳ ಮೊತ್ತವನ್ನು ನೀಡಲಾಗಿದೆ. 1ನೇ ವಾದಿಯು ತುಂಬಾ ಎಳೆಯ ವಯಸ್ಸಿನಲ್ಲಿ ತನ್ನ ತಂದೆಯನ್ನು ಕಳೆದುಕೊಂಡಿರುವುದರಿಂದ ಪ್ರೀತಿವಾತ್ಸಲ್ಯದ ನಷ್ಟದ ಹೆಸರಿನಲ್ಲಿ

2. (2009) 6 ಎಸ್‌ಸಿಸಿ 121

20,000/– ರೂ.ಗಳನ್ನು ನೀಡಲಾಗಿದೆ. ಸಾಂಪ್ರದಾಯಿಕ ಶೀರ್ಷಿಕೆಯಡಿಯಲ್ಲಿ ಮೊದಲ ಅಪೀಲು ನ್ಯಾಯಾಲಯವು ಈ ಮೊತ್ತವನ್ನು ನೀಡಿರುವುದರಲ್ಲಿ ದೋಷವನ್ನು ಹುಡುಕಲು ಸಾಧ್ಯವಾಗುವುದಿಲ್ಲ. ಈ ವಿಷಯದ ದೃಷ್ಟಿಯಲ್ಲಿ ಮೃತನ ವೈಯಕ್ತಿಕ ವೆಚ್ಚಕ್ಕೆ ಸಂಬಂಧಪಟ್ಟಂತೆ ಪ್ರತಿ ತಿಂಗಳಿಗೆ 1,000/– ರೂ.ಗಳನ್ನು ಕಟಾವು ಮಾಡಿದ ನಂತರ 6,16,000/–ರೂ.ಗಳ ನಷ್ಟಪರಿಹಾರವನ್ನು ನಿರ್ಧರಿಸಿರುವುದನ್ನು ಮೊದಲ ಅಪೀಲು ನ್ಯಾಯಾಲಯವು ಸಮರ್ಥಿಸಿಕೊಂಡಿದೆ.

14. ಮೋಟಾರು ಅಪಘಾತ ಕ್ಲೇಮುಗಳಲ್ಲಿ ನಷ್ಟಪರಿಹಾರವನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟ ತತ್ವಗಳನ್ನು ಅನ್ವಯಿಸುವಷ್ಟರ ಮಟ್ಟಿಗೆ ಮತ್ತೊಂದು ಕಡೆಯಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ***ಎಸ್.ಧನವೇಣಿ ಮತ್ತು ಇತರರು –ವಿರುದ್ಧ– ತಮಿಳುನಾಡು ರಾಜ್ಯ ಮತ್ತು ಇತರರು*** [3] ಪ್ರಕರಣದಲ್ಲಿ ನೀಡಲಾದ ಮದ್ರಾಸು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನಿರ್ಣಯಕ್ಕೆ ಸಂಬಂಧಪಡುವಷ್ಟು ಇದು ಉಪಯೋಗವಾಗುತ್ತದೆ. ವಿದ್ಯುಚ್ಛಕ್ತಿ ಮಂಡಳಿಯ ಕಾರಣದಿಂದ ವಿದ್ಯುತ್ ಸಂಚಲಿಸಿ ಆದ ಮರಣಕ್ಕೆ ಸಂಬಂಧಪಟ್ಟಂತೆ ಅವಲಂಬನೆಯನ್ನು ಗುಣಕ '12'ನ್ನು ಸೇರಿಸಿಕೊಳ್ಳುವ ಮೂಲಕ ಪ್ರತಿ ತಿಂಗಳಿಗೆ 1,500/– ರೂ.ನಂತೆ ನಿರ್ಧರಿಸಲಾಗಿತ್ತು. ದಾಂಪತ್ಯದ ನಷ್ಟ ಹಾಗೂ ಇರುವಿಕೆಯ ನಷ್ಟಕ್ಕೂ ಸಹ ಸದರಿ ಪ್ರಕರಣದಲ್ಲಿ ಪರಿಹಾರ ನೀಡಲಾಗಿದೆ. ಮೇಲೆ ಉಲ್ಲೇಖಿಸಲಾದ ***ಬೋರವ್ವ W/o ಮಲ್ಲಪ್ಪ ಗುಗ್ಗರಿ ಹಾಗೂ ಮತ್ತೊಬ್ಬರು –ವಿರುದ್ಧ– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ಇತರರು*** ಪ್ರಕರಣದಲ್ಲಿಯೂ ಸಹ ವಿದ್ಯುತ್ ಪ್ರವಹನದ ಕಾರಣದಿಂದ ಆದ ಸಾವಿನ ಸಂಬಂಧದಲ್ಲಿ ನಷ್ಟಪರಿಹಾರವನ್ನು ನಿರ್ಧರಿಸಲು ಅದೇ ತತ್ವಗಳನ್ನು ಅನ್ವಯಿಸಲಾಗಿದೆ. ಈ ಕಾರಣದಿಂದ ಮೋಟಾರು ಅಪಘಾತದಲ್ಲಿ ನಷ್ಟಪರಿಹಾರವನ್ನು ನಿರ್ಧರಿಸಲು ಅನ್ವಯಿಸಬಹುದಾದ ತತ್ವಗಳ ಆಧಾರದ ಮೇಲೆ ನಷ್ಟಪರಿಹಾರವನ್ನು ನಿರ್ಧರಿಸುವಲ್ಲಿ ಮಾನ್ಯ ಮೊದಲ ಅಪೀಲು ನ್ಯಾಯಾಲಯವು ಅಳವಡಿಸಿಕೊಂಡ ವಿಧಾನದಲ್ಲಿ ದೋಷವು ಕಂಡುಬರುವುದಿಲ್ಲ.

3. 1999 ಎಸಿಜೆ 728

15. ಮೊದಲ ಅಪೀಲು ನ್ಯಾಯಾಲಯವು, ದಂಡಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ ಅಥವಾ ದಂಡಪ್ರಕ್ರಿಯಾ ಸಂಹಿತೆಯ 22ನೇ ನಿಯಮದ 41ನೇ ಆದೇಶದ ಮೇರೆಗಿನ ಪಾಟೀ ಆಕ್ಷೇಪಣೆ ಮೇರೆಗೆ ಯಾವುದೇ ನಿಯತ ಅಪೀಲು ಇಲ್ಲವೆ 4,00,000/– ರೂ.ಗಳಿಂದ 6,16,000/– ರೂ.ಗಳವರೆಗೆ ನಷ್ಟಪರಿಹಾರವನ್ನು ಹೆಚ್ಚಿಸಿರುವುದನ್ನು ಸರಿಯಾಗಿ ಸಮರ್ಥಿಸಿಕೊಂಡಿದೆಯೇ ಎಂಬ ಮಹತ್ವಪೂರ್ಣವಾದ ಅಂಶ ಈ ಪ್ರಕರಣದಲ್ಲಿ ಉದ್ಭವವಾಗಿದೆ. ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ಗುರುತಿಸಿರುವಂತೆ, ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಯಾವ ಅಧಿಕಾರದ ಅಡಿಯಲ್ಲಿ ಅಪೀಲು ವಜಾಗೊಂಡಿದ್ದರೂ ನಷ್ಟಪರಿಹಾರವನ್ನು ಹೆಚ್ಚಿಸಿದೆ ಎಂಬುದನ್ನು ಕುರಿತಂತೆ ಯಾವುದೇ ಚರ್ಚೆಯನ್ನು ಮಾಡಿರುವುದಿಲ್ಲ. ಆದರೆ ದಂಡಪ್ರಕ್ರಿಯಾ ಸಂಹಿತೆಯ 33ನೇ ನಿಯಮದ 41ನೇ ಆದೇಶದ ಅಡಿಯಲ್ಲಿ ಕಂಡುಬರುವ ಒಂದು ಏಕೈಕ ಉಪಬಂಧವನ್ನು ನಾವು ಮರೆಯಲು ಸಾಧ್ಯವಾಗುವುದಿಲ್ಲ.

**೩೩. ಅಪೀಲು ನ್ಯಾಯಾಲಯದ ಅಧಿಕಾರ.–**

> ಅಪೀಲು ನ್ಯಾಯಾಲಯವು, ಯಾವುದೇ ಡಿಕ್ರಿಯನ್ನು ಹೊರಡಿಸುವ ಹಾಗೂ ಹೊರಡಿಸಲೇಬೇಕಾಗಿರುವ ಅಥವಾ ಮಾಡಲೇಬೇಕಾಗಿರುವ ಯಾವುದೇ ಆದೇಶವನ್ನು ಮಾಡುವ ಹಾಗೂ ಸಂದರ್ಭಾನುಸಾರ ಅಗತ್ಯವೆನಿಸಬಹುದಾದಂಥ ಹೆಚ್ಚಿನ ಅಥವಾ ಇತರ ಡಿಕ್ರಿ ಅಥವಾ ಆದೇಶವನ್ನು ಹೊರಡಿಸುವ ಅಥವಾ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಅಪೀಲು ಡಿಕ್ರಿಯ ಭಾಗ ಮಾತ್ರವಾಗಿದೆ ಎಂಬುದರಲ್ಲಿ ಏನೇ ಇದ್ದರೂ ನ್ಯಾಯಾಲಯವು ಈ ಅಧಿಕಾರವನ್ನು ಚಲಾಯಿಸಬಹುದು ಹಾಗೂ ಅಂಥ ಪ್ರತಿವಾದಿಗಳು ಅಥವಾ ಪಕ್ಷಕಾರರು ಯಾವುದೇ ಅಪೀಲು ಅಥವಾ ಆಕ್ಷೇಪಣೆಯನ್ನು

> ಸಲ್ಲಿಸದಿದ್ದರೂ, ಆ ಎಲ್ಲಾ ಅಥವಾ ಯಾವುದೇ ಪ್ರತಿವಾದಿಗಳು ಅಥವಾ ಪಕ್ಷಕಾರರ ಪರವಾಗಿ ಅಧಿಕಾರವನ್ನು ಚಲಾಯಿಸಬಹುದು (ಹಾಗೂ ಪಾಟೀ ದಾವೆಗಳಲ್ಲಿ ಡಿಕ್ರಿಗಳು ಇದ್ದಲ್ಲಿ ಅಥವಾ ಒಂದು ದಾವೆಯಲ್ಲಿ ಎರಡು ಅಥವಾ ಹೆಚ್ಚಿನ ಡಿಕ್ರಿಗಳಿದ್ದಲ್ಲಿ, ಅಂಥ ಡಿಕ್ರಿಗಳ ವಿರುದ್ಧ ಅಪೀಲನ್ನು ಸಲ್ಲಿಸದಿದ್ದರೂ ಎಲ್ಲಾ ಅಥವಾ ಯಾರೇ ಡಿಕ್ರಿದಾರರ ಸಂಬಂಧದಲ್ಲಿ ಚಲಾಯಿಸಬಹುದು):

16. ***ಪನ್ನಾಲಾಲ್ –ವಿರುದ್ಧ– ಬಾಂಬೆ ರಾಜ್ಯ*** [4], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 41ನೇ ಆದೇಶದ 33ನೇ ನಿಯಮವನ್ನು ಸಮಗ್ರವಾಗಿ ಚರ್ಚೆಗೆ ತೆಗೆದುಕೊಂಡಿದ್ದು ಸಂಬಂಧಪಟ್ಟ ಚರ್ಚೆಗಳನ್ನು 12 ಹಾಗೂ 14ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಕಾಣಬಹುದಾಗಿದೆ :

> 12. 41ನೇ ಕ್ರಮಾದೇಶದ ಮೇಲ್ನೋಟದ ಓದಿನಿಂದಲೇ ಅಪೀಲುದಾರ ಹಾಗೂ ಪ್ರತಿವಾದಿ ನಡುವೆ ಮಾತ್ರವಲ್ಲದೆ, ಒಬ್ಬ ಎದುರುದಾರ ಹಾಗೂ ಮತ್ತೊಬ್ಬ ಎದುರುದಾರನ ನಡುವೆ ಅಪೀಲು ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವ ಯಾವುದೇ ಆದೇಶವನ್ನು ಮಾಡಲು ವಿಶಾಲಾರ್ಥದಲ್ಲಿ ಸಶಕ್ತಗೊಳಿಸುವುದನ್ನು ಯಾರಿಗಾದರೂ ಮನವರಿಕೆ ಮಾಡಿಕೊಡಲು 33ನೇ ನಿಯಮವು ಸಾಕಷ್ಟಾಗುತ್ತದೆ. ಇದು, ಅಪೀಲು ನ್ಯಾಯಾಲಯವು, ಅಪೀಲನ್ನು ಪುರಸ್ಕರಿಸುವ ಅಥವಾ ವಜಾಗೊಳಿಸುವ ಮೂಲಕ ಅಪೀಲುದಾರನಿಗೆ

4. ಎಐಆರ್ 1963 ಎಸ್‌ಸಿ 1516

ಪರಿಹಾರವನ್ನು ನೀಡುವುದು ಅಥವಾ ತಿರಸ್ಕರಿಸುವುದು ಮಾತ್ರವಲ್ಲದೆ, "ಪ್ರಕರಣವು ಅಗತ್ಯಪಡಿಸಬಹುದಾದಂಥ" ಅಧಿಕಾರವನ್ನು ನೀಡುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಕಾನೂನಿನಲ್ಲಿ ಯಾವುದೇ ಅಡೆತಡೆಗಳಿಲ್ಲದಿದ್ದರೆ, ಆದ್ದರಿಂದ ಉಚ್ಚ ನ್ಯಾಯಾಲಯವು ರಾಜ್ಯದ ಅಪೀಲನ್ನು ಪುರಸ್ಕರಿಸಿದ್ದರೂ ತನಗೆ ವಿರುದ್ಧವಾದ ವಾದಿಗಳ ದಾವೆಗಳನ್ನು ವಜಾಗೊಳಿಸುವ ಮೂಲಕ ಎದುರುದಾರರಾಗಿ ಅಪೀಲಿಗೆ ಪಕ್ಷಕಾರರಾಗಿರುವ ಯಾವುದೇ ಅಥವಾ ಎಲ್ಲಾ ಇತರ ಪ್ರತಿವಾದಿಗಳ ವಿರುದ್ಧ ಡಿಕ್ರಿಯನ್ನು ವಾದಿಗೆ ನೀಡಬಹುದಾಗಿದೆ. ಪ್ರಕರಣದಲ್ಲಿರುವ ನಿಜವಾದ ಪದಗಳು, ಈ ಸ್ಥಾನವನ್ನು ಸಾಕಷ್ಟು ಸ್ಪಷ್ಟಪಡಿಸಿದರೆ, ನಿದರ್ಶನವು ವಾದವನ್ನು ಮೀರಿದ ಸ್ಥಾನವನ್ನು ನೀಡುತ್ತದೆ.

14. ವಾದಿಯು, ಆದೇಶ 41, ನಿಯಮ 22ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೇರೆಗೆ ಎದುರು ಆಕ್ಷೇಪಣೆಯನ್ನು ಸಲ್ಲಿಸುವ ಮೂಲಕ, ರಾಜ್ಯವನ್ನು ಹೊರತುಪಡಿಸಿ ಪ್ರತಿವಾದಿಗಳ ವಿರುದ್ಧ ದಾವೆಗಳನ್ನು ವಜಾಗೊಳಿಸುವಷ್ಟರ ಮಟ್ಟಿಗೆ ಅಧಿವಿಚಾರಣಾ ನ್ಯಾಯಾಲಯದ ಡಿಕ್ರಿಯನ್ನು ಪ್ರಶ್ನಿಸಬಹುದಾಗಿರುತ್ತದೆ ಎನ್ನುವ ಭಾವನೆಯನ್ನು ಇಡೀ ವಾದವು ಆಧರಿಸಿದೆ. ದಂಡ ಪ್ರಕ್ರಿಯಾ ಸಂಹಿತೆಯ 22ನೇ ನಿಯಮದ 41ನೇ ಆದೇಶದ ಮೇರೆಗೆ ಎದುರು ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿರುವ ಪಕ್ಷಕಾರನು, ಹಾಗೆ ಮಾಡಿರದಿದ್ದರೆ, ಅಪೀಲು ನ್ಯಾಯಾಲಯವು, ಯಾವುದೇ ಸನ್ನಿವೇಶಗಳಿಲ್ಲದ ಸಂದರ್ಭದಲ್ಲಿ ಸಂಹಿತೆಯ 33ನೇ ನಿಯಮದ 41ನೇ ಆದೇಶದ ಉಪಬಂಧಗಳ ಮೇರೆಗೆ ಅವನಿಗೆ ಪರಿಹಾರವನ್ನು

ನೀಡಬಹುದಾಗಿರುತ್ತದೆಯೆನ್ನುವ ಪ್ರಸ್ತುತ ಸಲಹೆಗೆ ನಮ್ಮ ಸಮ್ಮತ ಇರುವುದಿಲ್ಲ. ಪ್ರಶ್ನೆಯನ್ನು ಹೆಚ್ಚು ಚರ್ಚಿಸುವ ಅಗತ್ಯ ನಮಗಿಲ್ಲದಿದ್ದರೂ, ನಮ್ಮ ಅಭಿಪ್ರಾಯದಲ್ಲಿ, ಎದುರು ಆಕ್ಷೇಪಣೆಯನ್ನು ವಾದಿಯು ಸಲ್ಲಿಸಬಹುದಾಗಿದೆಯೆಂದು ಉಚ್ಚ ನ್ಯಾಯಾಲಯವು ತಳೆದಿರುವ ಭಾವನೆಯನ್ನು ಸಮರ್ಥಿಸಲಾಗುವುದಿಲ್ಲ.

17. ಸದೃಶವಾಗಿ, ***ಗಿಯಾನಿ ರಾಮ್ –ವಿರುದ್ಧ– ರಾಮ್‌ಜಿಲಾಲ್*** [5]***,*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎದುರುದಾರನು ಅಧಿವಿಚಾರಣಾ ನ್ಯಾಯಾಲಯದ ಡಿಕ್ರಿಯಿಂದ ಯಾವುದೇ ಅಪೀಲನ್ನು ಸಲ್ಲಿಸದಿದ್ದರೂ ದೋಷಾರೋಪವನ್ನು ಜಾರಿಗೊಳಿಸಲು ಎದುರುದಾರನ ಪರವಾಗಿ ಡಿಕ್ರಿಯನ್ನು ಹೊರಡಿಸುವ ನ್ಯಾಯಾಲಯವನ್ನು ಪ್ರತಿಷೇಧಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

18. ***ಪಟೇಲ್ ಚಂದ್ರಪ್ಪ ಹಾಗೂ ಮತ್ತೊಬ್ಬರು –ವಿರುದ್ಧ– ಹನುಮಂತಪ್ಪ ಹಾಗೂ ಇತರರು*** [6]***,*** ಪ್ರಕರಣದಲ್ಲಿ ವಿಭಾಗೀಯ ಪೀಠವು, ದಾವಾ ಅನುಸೂಚಿ ಸ್ವತ್ತನ್ನು ಅವರು ಹಂಚಿಕೊಳ್ಳಲು ಕಾನೂನಿನಲ್ಲಿ ಹಕ್ಕುಳ್ಳವರಾಗಿದ್ದಾರೆ, ಪಕ್ಷಕಾರರಿಗೆ ನಷ್ಟವನ್ನು ನೀಡುವುದು ಅಪೀಲು ನ್ಯಾಯಾಲಯದ ಕರ್ತವ್ಯವಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ***ದೆಹಲಿ ವಿದ್ಯುತ್ ಸರಬರಾಜು ಉದ್ಯಮ –ವಿರುದ್ಧ– ಬಸಂತಿ ದೇವಿ*** [7]***,*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಮಹಂತ್ ಧಾಂಗಿರ್ –ವಿರುದ್ಧ– ಮದನ್ ಮೋಹನ್*** [8]***,*** ಪ್ರಕರಣದಲ್ಲಿನ ಈ ಮೊದಲಿನ ನಿರ್ಣಯವನ್ನು ಉಲ್ಲೇಖಿಸಿ, 33ನೇ ನಿಯಮದ ಮೇರೆಗಿನ ಅಧಿಕಾರವು, ಅಪೀಲುದಾರ ಹಾಗೂ ಪ್ರತಿವಾದಿಯು ನಡುವೆ ಮಾತ್ರವಲ್ಲದೆ, ಆದರೆ ಎದುರುದಾರ ಹಾಗೂ ಸಹ–ಎದುರುದಾರರ ನಡುವೆಯೂ ಕೂಡ ಯಾವುದೇ ಪ್ರಶ್ನೆಯನ್ನು ನಿರ್ಧರಿಸಲು

5. ಎಐಆರ್ 1969 ಎಸ್‌ಸಿ 1144
6. 1990 (3) ಕೆಎಲ್‌ಜೆ 264
7. ಎಐಆರ್ 2000 ಎಸ್‌ಸಿ 43
8. ಎಐಆರ್ 1988 ಎಸ್‌ಸಿ 54

ಸಿವಿಲ್ ನ್ಯಾಯಾಲಯವನ್ನು ಸಶಕ್ತಗೊಳಿಸುತ್ತದೆ. ಅಪೀಲು ನ್ಯಾಯಾಲಯವು, ಯಾವುದೇ ಡಿಕ್ರಿ ಅಥವಾ ಆದೇಶವನ್ನು ಹೊರಡಿಸಬಹುದು, ಅದನ್ನು ಪ್ರಕರಣದ ಸನ್ನಿವೇಶಗಳಲ್ಲಿ ಹೊರಡಿಸಲೇಬೇಕಾಗುತ್ತದೆ. ದಂಡಪ್ರಕ್ರಿಯಾ ಸಂಹಿತೆಯ 41ನೇ ಆದೇಶ, 33ನೇ ನಿಯಮದಲ್ಲಿ ಬಳಸಲಾದ "ಸಂದರ್ಭಾನುಸಾರ ಅಗತ್ಯಪಡಿಸಬಹುದು" ಎನ್ನುವ ಪದಗಳನ್ನು ನ್ಯಾಯವನ್ನು ಮುಕ್ತಾಯಗೊಳಿಸಲು ಆದೇಶದಲ್ಲಿ ಯಾವುದೇ ಡಿಕ್ರಿಯನ್ನು ಹೊರಡಿಸಲು ಅಪೀಲು ನ್ಯಾಯಾಲಯವನ್ನು ಸಶಕ್ತಗೊಳಿಸಲು ವ್ಯಾಪಕವಾಗಿ ಇರಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಸದರಿ ತೀರ್ಪಿನಲ್ಲಿ ಸೇರಿಸಲಾದ ಒಂದೇ ಒಂದು ಎಚ್ಚರಿಕೆ ಪತ್ರ ಯಾವುದೆಂದರೆ, ಅಧೀನ ಅಪೀಲು ನ್ಯಾಯಾಲಯದ ಮುಂದಿರುವ ಪಕ್ಷಕಾರರು, ಅಪೀಲು ನ್ಯಾಯಾಲಯದ ಮುಂದೆ ಪಕ್ಷಕಾರರಾಗಲೇಬೇಕು ಎಂಬುದು ಹಾಗೂ ಉದ್ಭವಿಸಿದ ಪ್ರಶ್ನೆಯನ್ನು ಅಧೀನ ನ್ಯಾಯಾಲಯದ ತೀರ್ಪಿನಲ್ಲಿ ಸರಿಯಾಗಿ ಎತ್ತಬೇಕು ಎಂಬುದಾಗಿದೆ.

19. ***ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ನಿಯಮಿತ –ವಿರುದ್ಧ– ಅಕ್ಕಯ್ಯಮ್ಮ*** [9], ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, ವಿವೇಚನಾನುಸಾರ ಇದ್ದಾಗ್ಯೂ ಅಪೀಲು ನ್ಯಾಯಾಲಯವು, ಪಕ್ಷಕಾರರ ನಡುವೆ ಸಂಪೂರ್ಣ ನ್ಯಾಯವನ್ನು ನೀಡಲು ಆದೇಶದಲ್ಲಿ ಚಲಾಯಿಸಬಹುದಾಗಿದೆಯೆಂದು ಪುನರುಚ್ಛರಿಸಿದೆ. ಸದರಿ ಪ್ರಕರಣದ ಸಂಗತಿಗಳ ಪ್ರಕಾರ ಮೇಲೆ ಉಲ್ಲೇಖಿಸಲಾದ ***ಅಕ್ಕಯ್ಯಮ್ಮ*** ಪ್ರಕರಣದಲ್ಲಿ ಮೋಟಾರು ಅಪಘಾತ ಕ್ಲೇಮುಗಳನ್ನು ಮುಕ್ತವಲ್ಲದ ವಿಧಾನವನ್ನು ಅನ್ವಯಿಸುವ ಮೂಲಕ ಅವಲಂಬನೆಯ ನಷ್ಟವನ್ನು ಲೆಕ್ಕಹಾಕುವಾಗ ನ್ಯಾಯಾಧಿಕರಣವು ತುಂಬಾ ತಪ್ಪೆಸಗಿದೆ. ಹಾಗೂ ವಿಮಾ ಕಂಪನಿಯು ಸಲ್ಲಿಸಿದ ಅಪೀಲಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಅದನ್ನು ಗಮನಿಸಿದೆ. ಪಕ್ಷಕಾರರಿಗೆ ಸಂಪೂರ್ಣ ನ್ಯಾಯವನ್ನು ನೀಡುವ ಸಲುವಾಗಿ 41ನೇ ಕ್ರಮಾದೇಶದ 33ನೇ ನಿಯಮದ ಉಪಬಂಧಗಳನ್ನು ಕೋರಲಾಗಿದ್ದು ಹಾಗೂ ನಷ್ಟ ಪರಿಹಾರವನ್ನು 7,50,000/– ರೂ.ಗಳಿಂದ 10.02.000/–ರೂ.ಗಳಿಗೆ ಹೆಚ್ಚಿಸಲಾಗಿತ್ತು.

9. ಐಎಲ್ಆರ್ 2009 ಕೆಎಆರ್ 24

20. ಅಪೀಲುದಾರನ ಪರ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ಗುರುತಿಸಿದಂತೆ, ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ದಂಡ ಪ್ರಕ್ರಿಯಾ ಸಂಹಿತೆಯ 41ನೇ ಆದೇಶದ 33ನೇ ನಿಯಮದ ಉಪಬಂಧಗಳನ್ನು ಕುರಿತ ಯಾವುದೇ ಉಲ್ಲೇಖವನ್ನು ಮಾಡಿರುವುದಿಲ್ಲ. ಮೊದಲ ಅಪೀಲು ನ್ಯಾಯಾಲಯದ ತೀರ್ಪಿನಲ್ಲಿ ದಂಡಪ್ರಕ್ರಿಯಾ ಸಂಹಿತೆಯ ನಿಯಮ 33, ಕ್ರಮಾದೇಶ 41ರ ಉಪಬಂಧವನ್ನು ಸೂಚಿಸದಿರುವುದರ ಆಧಾರದ ಮೇಲೆ ಮೊದಲ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪನ್ನು ವಜಾಗೊಳಿಸುವುದು ಸೂಕ್ತವಾಗಿದೆಯೇ ಎಂಬುದು ಪ್ರಶ್ನೆಯಾಗಿದೆ. ದೃಢಕಾಯದ ಹಾಗೂ ಆರೋಗ್ಯವಂತ ವಿವಾಹಿತ ವ್ಯಕ್ತಿಯು, ವಿದ್ಯುತ್ ಪ್ರವಹನದ ಕಾರಣದಿಂದ ಮರಣಹೊಂದಿದ್ದು, ಸುಮಾರು 25 ವರ್ಷ ಸಣ್ಣ ವಯಸ್ಸಿನ ತನ್ನ ಹೆಂಡತಿಯನ್ನು ಹಾಗೂ 4 ವರ್ಷ ವಯಸ್ಸಿನ ಮಗನನ್ನು ಹಾಗೂ ಸುಮಾರು 55 ವರ್ಷ ವಯಸ್ಸಿನ ತಾಯಿಯನ್ನು ಅಗಲಿರುವುದನ್ನು ಪರಿಗಣನೆಗೆ ತೆಗೆದುಕೊಂಡು, ಮಾನ್ಯ ನ್ಯಾಯಾಧೀಶರು ಯುಕ್ತ ನಷ್ಟಪರಿಹಾರವನ್ನು ನೀಡುವ ಮೂಲಕ ನ್ಯಾಯುವನ್ನು ನೀಡಲು ದಂಡಪ್ರಕ್ರಿಯಾ ಸಂಹಿತೆಯ 41ನೇ ಆದೇಶದ 33ನೇ ನಿಯುಮದ ಉಪಬಂಧಗಳನ್ನು ಸೂಚ್ಯವಾಗಿ ಆಧರಿಸಿದ್ದಾರೆಂದು ಹೇಳಬಹುದಾಗಿದೆ.

21. ಸಹಜವಾಗಿ, ಮಾನ್ಯ ನ್ಯಾಯಾಧೀಶರು, ಮೋಟಾರು ಅಪಘಾತ ಕ್ಲೇಮುಗಳ ಪ್ರಕರಣಗಳಲ್ಲಿ ನಷ್ಟಪರಿಹಾರವನ್ನು ನಿರ್ಧರಿಸುವ ಸಂಬಂಧದಲ್ಲಿ ತತ್ವಗಳನ್ನು ಅನ್ವಯಿಸುವ ಮೂಲಕ ನಷ್ಟಪರಿಹಾರವನ್ನು ನಿರ್ಧರಿಸಿದ್ದಾರೆ. ಮೃತರು ದೃಢಕಾಯ ಹಾಗೂ ಆರೋಗ್ಯವಂತರಾಗಿದ್ದರೆಂಬುದನ್ನು ಹಾಗೂ ಅವರನ್ನು ಮೂರು ಜನ ವ್ಯಕ್ತಿಗಳು ಅವಲಂಬಿಸಿದ್ದರು ಎಂಬುದನ್ನು ಹಾಗೂ ಕೃಷಿ ಚಟುವಟಿಕೆಗಳನ್ನು ಮಾಡುವ ಹಾಗೂ ತನ್ನ ಸ್ವಂತದ ಹಸುಗಳನ್ನು ಸಾಕುವ ಮೂಲಕ ಹಾಲನ್ನು ಮಾರಾಟ ಮಾಡಿ ತನ್ನ ಕುಟುಂಬವನ್ನು ನೋಡಿಕೊಳ್ಳುತ್ತಿದ್ದನೆಂಬುದನ್ನು ಪರಿಗಣನೆಗೆ ತೆಗೆದುಕೊಂಡು ಮೊದಲ ಅಪೀಲು ನ್ಯಾಯಾಲಯವು ನಿರ್ಧರಿಸಿದ ನಷ್ಟಪರಿಹಾರವು, ವಾಸ್ತವವಾಗಿ ತುಂಬಾ ಕಡಿಮೆಯಾಗಿದೆಯೆಂಬುದನ್ನು ತಿಳಿಸಬಹುದಾಗಿದೆ. ಮೊದಲ

ಅಪೀಲು ನ್ಯಾಯಾಲಯದ ನ್ಯಾಯಾಧೀಶರು, ಪರಿಗಣನೆಗೆ ತೆಗೆದುಕೊಳ್ಳುವ ಎಲ್ಲಾ ಸಂಬಂಧಪಟ್ಟ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಸಾಧ್ಯತೆಗಳ ಸ್ಥೂಲ ಆಧಿಕ್ಯದ ಆಧಾರದ ಮೇಲೆ ನಷ್ಟಪರಿಹಾರವನ್ನು ನಿರ್ಧರಿಸಿದ್ದಾರೆಂಬುದನ್ನು ತಿಳಿಸಲು ಇದು ಸಾಕಾಗುತ್ತದೆ. ಮೊದಲ ಅಪೀಲು ನ್ಯಾಯಾಲಯವು, ಪಕ್ಷಕಾರರ ನಡುವೆ ನ್ಯಾಯವನ್ನು ನೀಡಲು ಅಧಿಕಾರವನ್ನು ಹೊಂದಿಲ್ಲವೆನ್ನುವ ರೀತಿಯಲ್ಲಿ ಇದು ಇಲ್ಲ. ಮಾನ್ಯ ನ್ಯಾಯಾಧೀಶರು, ದಂಡಪ್ರಕ್ರಿಯಾ ಸಂಹಿತೆಯ 41ನೇ ಆದೇಶ 33ನೇ ನಿಯಮದ ಅಡಿಯಲ್ಲಿ ಅವರಿಗೆ ನಿಹಿತವಾದ ಅಧಿಕಾರದ ಯಾವುದೇ ನಿರ್ದಿಷ್ಟ ಉಲ್ಲೇಖವನ್ನು ಮಾಡಿರದಿದ್ದರೂ ನಷ್ಟಪರಿಹಾರವನ್ನು ಹೆಚ್ಚಿಸುವ ಮೂಲಕ ಸರಿಯಾದ ಕೆಲಸವನ್ನು ಮಾಡಿದ್ದಾರೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಮಾನ್ಯ ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು, ಉದಾಸೀನದ ಕಾರಣದಿಂದ ಆದ ಮರಣಕ್ಕೆ ಸಂಬಂಧಪಟ್ಟಂತೆ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣದಲ್ಲಿ ಸಾಮಾನ್ಯವಾಗಿ ನೀಡುವ, ಪ್ರತಿವರ್ಷಕ್ಕೆ ಶೇಕಡಾ 6ರಿಂದ 12ರಷ್ಟು ಸಂದಾಯ ಮಾಡಬೇಕಾದ ಬಡ್ಡಿಯನ್ನು ಇಳಿಸಿರುವುದನ್ನು ಕಾಣಬಹುದಾಗಿದೆ.

22. ವಿಷಯದ ಕಾರಣದಿಂದ ಈ ನ್ಯಾಯಾಲಯವು, ಪರಿಗಣನೆಗೆ ಸಂಬಂಧಪಡುವ ಅಪೀಲು ಮೆಮೋನಲ್ಲಿ ಪ್ರಸ್ತಾವಿಸಲಾದ ಕಾನೂನಿನ ಯಾವುದೇ ಗಣನೀಯ ಪ್ರಶ್ನೆಗಳನ್ನು ಎತ್ತಿರುವುದಿಲ್ಲ. ಅದಲ್ಲದೆಯೂ, ಪರಿಗಣನೆಗಾಗಿ ಈ ನ್ಯಾಯಾಲಯದ ಮುಂದೆ ಗಣನೀಯವಾದ ಕಾನೂನಿನ ಪ್ರಶ್ನೆಗಳು ಎದ್ದಿರುವುದಿಲ್ಲ. ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪೀಲನ್ನು ವಜಾಗೊಳಿಸಬೇಕಾಗುತ್ತದೆ.

23. ನಷ್ಟಪರಿಹಾರದ ನಿರ್ಧರಣೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಒಂದು ಚಿಕ್ಕ ಮಾರ್ಪಾಡು ಅಗತ್ಯವಾಗಿರುತ್ತದೆ. 3ನೇ ಪ್ರತಿವಾದಿಯು ಮೊದಲನೇ ವರ್ಗದ ವಾರಸುದಾರರಾಗಿದ್ದರೂ, ತನ್ನ ಮೊಮ್ಮೊಗನೊಂದಿಗೆ ಹಾಗೂ ಸೊಸೆಯೊಂದಿಗೆ 1/3ರಷ್ಟು ಪಾಲನ್ನು ಹಂಚಿಕೊಳ್ಳಲು ಹಕ್ಕುಳ್ಳವರಾಗುವರು. ಈ ನ್ಯಾಯಾಲಯವು ವಾದಿ ಸಂ.1 ಹಾಗೂ 2 ಇವರು ದೀರ್ಘಕಾಲದ ಜೀವನ ನಡೆಸುವರೆಂದು ಹಾಗೂ ಆದ್ದರಿಂದ ವಾದಿ ಸಂ.1 ಹಾಗೂ 2 ಇವರ ಹೆಸರಿಗೆ ಹೆಚ್ಚು ನಷ್ಟಪರಿಹಾರದ

ಪಾಲನ್ನು ಹಾಗೂ 3ನೇ ವಾದಿಯು ಕಡಿಮೆ ನಷ್ಟಪರಿಹಾರವನ್ನು ಪಡೆಯುವವರಾಗಿರುವರು ಎನ್ನುವ ಸತ್ಯವನ್ನು ಮರೆಯಲು ಸಾಧ್ಯವಾಗಿಲ್ಲ.

24. ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, 3ನೇ ವಾದಿಯ ಹೆಸರಿಗೆ 50,000/–ರೂ.ಗಳ ಮೊತ್ತದ ಪಾಲು ನೀಡಲಾಗಿದೆ. ಉಳಿದ ಮೊತ್ತವನ್ನು 1ನೇ ವಾದಿಗೆ ಹಾಗೂ 2ನೇ ವಾದಿಗೆ ಸಮನಾಗಿ ಪಾಲು ಮಾಡುವುದು ಹಾಗೂ ಅಪ್ರಾಪ್ತ ವಯಸ್ಕನಾಗಿರುವ 1ನೇ ವಾದಿಯ ಪಾಲನ್ನು ಅವನು ಪ್ರಾಪ್ತ ವಯಸ್ಸನ್ನು ತಲುಪುವವರೆಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಡಲು, 2ನೇ ಪ್ರತಿವಾದಿಯು, ಅವನ ಪ್ರಯೋಜನಕ್ಕೆ ಕಾಲಕಾಲಕ್ಕೆ ಪ್ರಾಪ್ತವಾದ ಬಡ್ಡಿಯನ್ನು ತೆಗೆದುಕೊಳ್ಳಲು 2ನೇ ಪ್ರತಿವಾದಿಯು ಸ್ವಾತಂತ್ರ್ಯ ಹೊಂದಿರುವನು. ಈವರೆಗೆ ಮೃತನ ಪತ್ನಿಯಾಗಿರುವ 2ನೇ ಪ್ರತಿವಾದಿಗೆ ನೀಡಲಾದ ನಷ್ಟಪರಿಹಾರ 75,000/– ರೂ.ಗಳ ಮೊತ್ತವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಹಾಗೂ ಉಳಿದ ಮೊತ್ತವನ್ನು 10 ವರ್ಷಗಳ ಅವಧಿಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಡಬೇಕಾಗಿದ್ದು, ಯಾವುದೇ ಋಣಭಾರರಾಹಿತ್ಯವಿಲ್ಲದೆ ಕಾಲಕಾಲಕ್ಕೆ ಬಡ್ಡಿಯನ್ನು ಪಡೆಯಲು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.